# ಸ್ವಾಮಿ ವಿವೇಕಾನಂದರ ಚಿಂತನೆಗಳ ಪ್ರಸ್ತುತತೆ

ಎಸ್.ಆರ್. ರಾಮಸ್ವಾಮಿ

(ಹಿಂದಿನ ಸಂಚಿಕೆಯಿಂದ)

ಹಿಂದಿನ ಸಂಚಿಕೆಯಲ್ಲಿ

ಎಲ್ಲ ಬಗೆಯ ಪ್ರಗತಿಗೂ ಸಮುಚಿತ ಭೂಮಿಕೆಯನ್ನು ನಿರ್ಮಿಸಬಲ್ಲದ್ದು 'ಧಾರ್ಮಿಕತೆ' ಮಾತ್ರ ಎಂಬುದು ಸ್ವಾಮಿ ವಿವೇಕಾನಂದರ ವಿಶ್ಲೇಷಣೆ. ಸ್ವಾಮೀಜಿಯವರ ಎಲ್ಲ ಚಿಂತನೆಯಲ್ಲೂ ಅಂತರ್ವಾಹಿನಿಯಾಗಿರುವ ಸಂರಚನೆಯೆಂದರೆ ಭಾರತದ ಸನಾತನ ಅಧ್ಯಾತ್ಮಜ್ಞಾನಕ್ಕೆ ಹೊಸ ವಾಣಿಯನ್ನು ನೀಡಿದುದು. ಸ್ವಾಮಿ ವಿವೇಕಾನಂದರ ಈ ಹೊಸ ದೃಷ್ಟಿ ಧಾರ್ಮಿಕ ಮತ್ತು ಆಧ್ಯಾತ್ಮಿಕ ಕ್ಷೇತ್ರಗಳಿಗಷ್ಟೆ ಸೀಮಿತವಾಗಿರಲಿಲ್ಲ. ಅವರು ಮುಖ್ಯವೆಂದು ಪರಿಗಣಿಸಿ ಮೇಲಿಂದ ಮೇಲೆ ವ್ಯಾಖ್ಯಾನ ಮಾಡಿದ ಎಲ್ಲ ವಿಷಯಗಳಲ್ಲಿಯೂ ಅವರದು ಭಿನ್ನವೂ ಸ್ವೋಪಜ್ಞವೂ ಆದ ದೃಷ್ಟಿಯೇ ಆಗಿತ್ತು. ಉದಾಹರಣೆಗೆ ಪ್ರತ್ಯೇಕವೂ ಪರಸ್ಪರ ವಿರುದ್ಧವೂ ಎಂಬಂತೆ ಸ್ವತಂತ್ರ ದಾರಿಗಳಲ್ಲಿ ನಡೆಯುತ್ತಿದ್ದ ಭೌತವಿಜ್ಞಾನವನ್ನೂ, ತತ್ತ್ವಶಾಸ್ತ್ರವನ್ನೂ ಒಂದಕ್ಕೊಂದು ಅಭಿಮುಖವಾಗಿಸಿದವರು ಸ್ವಾಮಿ ವಿವೇಕಾನಂದರು.

### ಸ್ವಾಮಿ ವಿವೇಕಾನಂದರ ಚಿಂತನೆಯ ಸಾಂದರ್ಭಿಕತೆ

**ಇತಿಹಾಸಪ್ರಜ್ಞೆ ಮತ್ತು ವಿಶ್ವವಿಶಾಲ ದೃಷ್ಟಿ, ದೃಢವಾದ ಆಧ್ಯಾತ್ಮಿಕ ನೆಲಗಟ್ಟು, ಪರಂಪರೆ–ಆಧುನಿಕತೆಗಳ ಹಾಗೂ ಧ್ಯೇಯವಾದ ಮತ್ತು ವ್ಯವಹಾರ್ಯತೆಗಳ ನಡುವಣ ಸಮನ್ವಯ–** ಇವು ಸ್ವಾಮಿ ವಿವೇಕಾನಂದರಲ್ಲಿ ಎದ್ದುಕಾಣುವ ಅತಿಶಯಗಳು.

ಗಮನಿಸಬೇಕಾದ ಇನ್ನೊಂದು ಅಂಶವೆಂದರೆ ವ್ಯವಹಾರಕ್ಕೆ ಅಳವಡಿಸುವ ಆಶಯವನ್ನು ಕಾರ್ಯಗತಗೊಳಿಸುವಲ್ಲಿ ಸ್ವಾಮೀಜಿ ಆಧ್ಯಾತ್ಮಿಕತೆಯನ್ನಾಗಲಿ ಧಾರ್ಮಿಕತೆಯನ್ನಾಗಲಿ ದುರ್ಬಲಗೊಳಿಸಲಿಲ್ಲ; ಪ್ರತಿಯಾಗಿ ಅವುಗಳನ್ನು ಇನ್ನಷ್ಟು ದೃಢಗೊಳಿಸಿದರು. ಇದು ಎಷ್ಟು ಮುಖ್ಯವೋ ಅಷ್ಟೇ ನಾಜೂಕಿನ ಕೆಲಸವೂ ಆಗಿತ್ತು. ಧರ್ಮದ ಬಗ್ಗೆ, ಅಧ್ಯಾತ್ಮದ ಬಗ್ಗೆ, ವೇದಾಂತ ವಾಙ್ಮಯದ ಬಗ್ಗೆ ಗ್ರಂಥಗಳಿಗೂ, ಪ್ರವಚನಕಾರರಿಗೂ ಸ್ವಾಮೀಜಿಯವರ ಕಾಲದಲ್ಲಿಯೂ ಕೊರತೆಯೇನಿರಲಿಲ್ಲ. ಬೇಕಾದವರು ಬೇಕಾದಂತೆ ಪ್ರತಿಪಾದಿಸಲು ಯಥೇಚ್ಛವಾದ ಅವಕಾಶಗಳಿದ್ದವು. ಈಚಿನ ದಶಕಗಳಲ್ಲಂತೂ ಎಂದರೆ ಇಪ್ಪತ್ತನೇ ಶತಮಾನದ ಮಧ್ಯಭಾಗದಿಂದೀಚೆಗೆ ವೇದಾಂತವನ್ನು 'ಮಾರಾಟ' ಮಾಡುವ ದಂಧೆ ವಿಶಾಲವಾಗಿ ಹರಡಿದೆ.

ಸ್ವಾಮಿ ವಿವೇಕಾನಂದರಿಗೆ, ತಾವು ಕೈಗೊಂಡ ಕಾರ್ಯ ಎಷ್ಟು ಹೊಣೆಗಾರಿಕೆಯದೆಂಬ ಪೂರ್ಣ ಅರಿವಿತ್ತು. ಮೊದಲನೆಯದಾಗಿ ಅಧ್ಯಾತ್ಮಸಾಧನೆಯ ಪರಾಕಾಷ್ಠಸ್ಥಿತಿಗೇರಿದ್ದ ಭಗವಾನ್ ಶ್ರೀರಾಮಕೃಷ್ಣ ಪರಮಹಂಸರ ಪೂರ್ಣಾನುಗ್ರಹಕ್ಕೆ ಸ್ವಾಮೀಜಿ ಪಾತ್ರರಾಗಿದ್ದರು. ಎರಡನೆಯದಾಗಿ ಗಾಢವೂ ಸಮಗ್ರವೂ ಆದ ಶಾಸ್ತ್ರಾಧ್ಯಯನದಿಂದ ಅವರ ಬುದ್ಧಿಶಕ್ತಿ ಪ್ರಖರವಾಗಿತ್ತು. ಮೂರನೆಯದಾಗಿ ಸಮಾಜದೊಡನೆ ತಾದಾತ್ಮ್ಯವೆಂಬುದು ಅವರ ಮಟ್ಟಿಗೆ ಕೇವಲ ವೈಚಾರಿಕ ಧೋರಣೆಯಾಗಿರದೆ, ವೈಯಕ್ತಿಕ ಶ್ರದ್ಧೆಯ ವಿಷಯವೂ ಆಗಿತ್ತು. ಈ ಅಂಶಗಳು ಸ್ವಾಮೀಜಿಯವರ ಜೀವಿತಕಾರ್ಯವನ್ನು ಅನನ್ಯವಾಗಿಸಿದ್ದವು, ಅತ್ಯಂತ ಪ್ರಭಾವಿಯಾಗಿಸಿದ್ದವು. ಅವರ ಮಹಾಸಮಾಧಿಯಾದ ನೂರು ವರ್ಷಗಳಾದ ಮೇಲೂ ಅವರ ಚಿಂತನೆಯ ಪ್ರೇರಕತೆ ಜೀವಂತವಾಗಿ ಉಳಿದಿರುವುದಷ್ಟೆ ಅಲ್ಲದೆ, ನಿರಂತರವಾಗಿ ಹೆಚ್ಚು ಹೆಚ್ಚು ಪ್ರಸರಣಗೊಳ್ಳುತ್ತಿರುವುದು ನಿಜಕ್ಕೂ ವಿಸ್ಮಯಕರ.

ಆಳವಾಗಿ ಪರಿಶೀಲಿಸಿದಾಗ ಸ್ವಾಮಿ ವಿವೇಕಾನಂದರ ಒಂದೊಂದು ಚಿಂತನೆ, ಒಂದೊಂದು ಆಲೋಚನೆಯೂ ದೂರದೃಷ್ಟಿಯದೆಂದು ಸ್ಫುಟವಾಗುತ್ತದೆ. ಇದಕ್ಕೆ ಕಾರಣ ಸ್ಪಷ್ಟವಿದೆ. ಸ್ವಾಮೀಜಿಯವರ ಬಾಹ್ಯ ಪ್ರವರ್ತನೆಗಳು ತತ್ಕಾಲೀನ; ಆದರೆ ಅವರ ಸ್ಫುರಣೆಯ ಉಗಮಸ್ರೋತವು ದೇಶಕಾಲಾತೀತವಾದದ್ದು. ಸ್ವಾಮೀಜಿಯವರ ಜೀವಿತಕಾರ್ಯ ನಡೆದದ್ದು ಒಂದು ಯುಗಸಂಧಿಯ ಸಮಯದಲ್ಲಿ. ಅದು ಸಾಂಪ್ರದಾಯಿಕತೆ ಆಯಾಸಗೊಂಡಿದ್ದ ಕಾಲ; ಆಧುನಿಕತೆಯು ದಿಗಂತವನ್ನು ಭೇದಿಸಿಕೊಂಡು ಬಳಿಸಾರುತ್ತಿದ್ದ ಕಾಲ. ಚಿರಂತನ ಮೌಲ್ಯಗಳನ್ನು ನಷ್ಟಗೊಳಿಸದೆ ನವಜೀವನೋಪಯೋಗಿ ಆವಿಷ್ಕರಣಗಳನ್ನು ಅಳವಡಿಸಿಕೊಳ್ಳುವುದು ಹೇಗೆ ಎಂಬುದು ಆಗ ಇದ್ದ ಸವಾಲು. ಕಾಲಗತಿಯ ಪ್ರವಾಹವನ್ನು ಪ್ರತಿಬಂಧಿಸುವುದು ಶಕ್ಯವಲ್ಲ ಎಂದ ಮೇಲೆ ಮಾನವತೆಗಿರುವ ಏಕೈಕ ಪರ್ಯಾಯವೆಂದರೆ ಆಧುನಿಕ ಬಾಹ್ಯ ಆವಿಷ್ಕರಣಗಳನ್ನು ಸ್ವೀಕರಿಸಿಯೂ, ಆಂತರಂಗಿಕ ಸ್ವಾಸ್ಥ್ಯಕ್ಕೆ ಬಾಧೆಯಾಗದಂತೆ ಎಚ್ಚರಿಕೆ ವಹಿಸುವುದು. ಈ ಸೂತ್ರೀಕರಣ ಸರಳವಾಗಿ ಕಂಡರೂ ಇದರ ಅನುಷ್ಠಾನ ಸುಲಭವಲ್ಲ. ಏಕೆಂದರೆ ಹೊಸದಾದುದರಲ್ಲಿ ರಭಸವೂ, ಆಕರ್ಷಣೆಯೂ ಅಧಿಕ; ಹಳೆಯದರಲ್ಲಿ ಗುಣದಾರ್ಢ್ಯವಿದ್ದರೂ ಹಲವೊಮ್ಮೆ ಸಾಮರ್ಥ್ಯ ಕಡಮೆ. ಹೀಗೆ ಸ್ವಲ್ಪ ಮಟ್ಟಿನ ಸಂಘರ್ಷವು ಸಹಜ. ಈ ಸಂಘರ್ಷವನ್ನು ಕನಿಷ್ಠಗೊಳಿಸುವುದರ ಅಗತ್ಯವನ್ನು ಮನಗಂಡು ಇದಕ್ಕೆ ಸಂಗತವಾದ ದಿಗ್ದರ್ಶನ ಮಾಡಿದವರು ಸ್ವಾಮಿ ವಿವೇಕಾನಂದರು.

ಅವರು ತಮ್ಮ ಸುಪ್ರಸಿದ್ಧ ಲಾಹೋರ್ ಉಪನ್ಯಾಸದಲ್ಲಿ (೧೨.೧೧.೧೮೯೭) ಘೋಷಿಸಿದುದು ಇದನ್ನೇ: "ಜೀವನದ ಪ್ರತಿಯೊಂದು ಭೂಮಿಕೆಯಲ್ಲಿಯೂ ಅದ್ವೈತವನ್ನು ಅನುಷ್ಠಾನ ಮಾಡುವ ಸಮಯವು ನಿಮಗೀಗ ಪ್ರಾಪ್ತವಾಗಿದೆ. ಆಕಾಶದಲ್ಲಿ

> ನಮಗಿಂದು ಬೇಕಾಗಿರುವುದು ಶ್ರೀಕೃಷ್ಣ ಗೀತೆಯಲ್ಲಿ ಹೇಳುವಂತೆ ಅತಿ ತೀವ್ರವಾದ ಕರ್ಮಯೋಗ, ಅಸೀಮ ಧೈರ್ಯ, ಅದಮ್ಯ ಶಕ್ತಿ. ಆಗ ಮಾತ್ರ, ಈ ದೇಶದ ಜನ ಎಚ್ಚರವಾಗಬಲ್ಲರು. ಇಲ್ಲದೇ ಇದ್ದರೆ, ಈಗಿನಂತೆಯೇ ಅವರು ಎಂದೆಂದಿಗೂ ಅಜ್ಞಾನದಲ್ಲಿ ಉಳಿಯುವರು. **– ಸ್ವಾಮಿ ವಿವೇಕಾನಂದ**

ಇರುವ ಅದನ್ನು ಭೂಮಿಗೆ ಎಳೆದು ತರೋಣ. ಇದೇ ನಮ್ಮ ಮುಂದಿರುವ ನೂತನ ಕರ್ತವ್ಯ. 'ಅದೇ ನಮ್ಮ ಕರ್ತವ್ಯ' ಎಂದು ನಮ್ಮ ಪೂರ್ವಿಕರ ಆತ್ಮಗಳು ಕೂಗಿ ಹೇಳುತ್ತಿವೆ. ಸಮಾಜದ ಮೂಲೆಮುಡುಕುಗಳನ್ನು ಮುಟ್ಟುವವರೆಗೂ, ಅದು ಸರ್ವರ ಸ್ವತ್ತಾಗುವವರೆಗೂ, ಅದು ನಮ್ಮ ಬದುಕಿನ ಅವಿಭಾಜ್ಯ ಅಂಗ ವಾಗುವವರೆಗೂ, ನಮ್ಮ ನಾಡಿಯನ್ನು ಪ್ರವೇಶಿಸಿ ಪ್ರತಿಯೊಂದು ರಕ್ತಕಣದಲ್ಲಿಯೂ ಅನುರಣಿತವಾಗುವವರೆಗೂ ನಿಮ್ಮ ಈ ಬೋಧನೆಯು ಜಗತ್ತನ್ನೆಲ್ಲ ವ್ಯಾಪಿಸಲಿ" (ಕೃತಿಶ್ರೇಣಿ, ಸಂ. ೩, ಪುಟ ೨೮೪).

## ಜೀವಸ್ವರ–ಧಾರ್ಮಿಕತೆ

ಸ್ವಾಮೀಜಿಯವರ ಚಿಂತನೆಯಲ್ಲಿ ದಾರ್ಶನಿಕತೆಯೂ, ವಾಸ್ತವಿಕತೆಯ ಪ್ರಜ್ಞೆಯೂ ಮಿಳಿತವಾಗಿವೆ. ರಾಷ್ಟ್ರೋನ್ನತಿಯು ಆಧ್ಯಾತ್ಮಿಕ ಪರಿಧಿಯಲ್ಲಿಯೇ ನಡೆಯಬೇಕೆಂಬ ಅವರ ವಾದವು ಭಾರತೀಯ ಮಾನಸಿಕತೆಯ ವಿಚಾರಪೂರ್ವಕ ಗ್ರಹಿಕೆಯನ್ನು ಆಧರಿಸಿದುದು.

"ಪ್ರತಿಯೊಂದು ದೇಶಕ್ಕೂ ತನ್ನ ಉದ್ದೇಶಸಾಧನೆಗೆ ಬೇರೆ ಬೇರೆ ಮಾರ್ಗಗಳಿವೆ. ಕೆಲವರು ರಾಜನೀತಿಯ ಮೂಲಕ, ಕೆಲವರು ಸಮಾಜಸುಧಾರಣೆಯ ಮೂಲಕ, ಮತ್ತೆ ಕೆಲವರು ಇನ್ನೂ ಬೇರೆ ಯಾವುದಾದರೂ ಮಾರ್ಗದ ಮೂಲಕ ಅದನ್ನು ಮಾಡುತ್ತಾರೆ. ನಮಗೆ [ಭಾರತೀಯರಿಗೆ] ಇರುವುದು ಧರ್ಮಮಾರ್ಗವೊಂದೇ. ಆ ಪಥವೊಂದರಲ್ಲಿಯೆ ನಾವು ನಡೆಯಬೇಕಾಗಿದೆ... ಹಿಂದುವು ರಾಜಕೀಯವನ್ನು ಕೂಡ ಧರ್ಮದ ಮೂಲಕ ಹೇಳಿದರೆ ಮಾತ್ರ ಗ್ರಹಿಸಬಲ್ಲನು. ಸಮಾಜಶಾಸ್ತ್ರ ಕೂಡಾ ಧರ್ಮದ ಮೂಲಕ ಬರಬೇಕು... ಏಕೆಂದರೆ [ನಮ್ಮ] ರಾಷ್ಟ್ರಜೀವನದ ಸಂಗೀತಕ್ಕೆ ಇದೇ ಮುಖ್ಯ ಸ್ವರ; ಉಳಿದುವೆಲ್ಲ ಬದಲಾಗುತ್ತಿರುವ ಗೌಣ ವಿಷಯಗಳು" (ಕಲ್ಕತ್ತೆಯ ಬಿನ್ನವತ್ತಳೆಗೆ ಉತ್ತರ, ಕೃತಿಶ್ರೇಣಿ, ಸಂ. ೩, ಪುಟ ೧೮೫).

ಎಷ್ಟೇ ಸಮರ್ಪಕ ಯೋಜನೆಗಳಾದರೂ, ಅವು ಹೊರಗಿನಿಂದ ಹೇರಲ್ಪಟ್ಟರೆ ಈಡೇರುವ ಖಾತರಿಯಿಲ್ಲ. ಯಾರಿಗಾಗಿ ಯೋಜನೆಗಳು ರೂಪಿತವಾಗಿರುತ್ತವೋ ಅವರ ಸಹಭಾಗಿತ್ವವಿದ್ದಲ್ಲಿ ಮಾತ್ರ ಅಷ್ಟಿಷ್ಟು ಸಾಧನೆಯಾದೀತು. ಜನರಲ್ಲಿ ಮೊದಲು ಪ್ರೇರಣೆಯನ್ನು ಬಿತ್ತುವ ಕೆಲಸ ಆಗಬೇಕು. ಪ್ರೇರಣೆಯ ಅಭಾವದ ಕಾರಣದಿಂದಲೆ ಅನೇಕ ಸುಧಾರಣಾ ಪ್ರಯತ್ನಗಳು ಪರಿಣಾಮಕಾರಿಯಾಗದಿರುವುದು. ಇಂಥ ಪ್ರೇರಣೆಯ ಪ್ರಸಾರಕ್ಕೆ ಅತ್ಯಂತ ಸರಳ ಸಾಧನವೆಂದರೆ 'ಪಾವಿತ್ರ್ಯ ಪ್ರಜ್ಞೆ' ಎಂದಿದ್ದಾರೆ ಸ್ವಾಮೀಜಿ.

"ಮಾನವನ ಪವಿತ್ರತೆಯನ್ನು ನಿಜವಾಗಿ ತಿಳಿದುಕೊಂಡವನು ಮಾಡುವ ಕೆಲಸ ಎಷ್ಟು ಶಾಂತಿಯಿಂದ ಕೂಡಿರುವುದು! ಅಂತಹ ವರು ಮತ್ತೇನೂ ಮಾಡಬೇಕಾಗಿಲ್ಲ, ಜನರ ಅಜ್ಞಾನವನ್ನು ಮಾತ್ರ ಪರಿಹರಿಸಬೇಕಾಗಿದೆ. ಉಳಿದುವುಗಳೆಲ್ಲ ತಾವೇ ಅಣಿ ಯಾಗುವುವು." (ಚಿಂತನೆಯ ಹನಿಗಳು – ೨, ಕೃತಿಶ್ರೇಣಿ ಸಂ. ೮, ಪುಟ ೪೧೭).

ಆರ್ಥಿಕತೆ, ತಂತ್ರಜ್ಞಾನ ಮುಂತಾದ ಕ್ಷೇತ್ರಗಳಲ್ಲಿ ಎಷ್ಟೆಲ್ಲ ಪ್ರಗತಿಯಾಗಿದ್ದರೂ ಈಗಲೂ, ಅಂದರೆ ೨೦೧೯ ನೆಯ ಇಸವಿಯಲ್ಲಿಯೂ 'ಉನ್ನತ'ರೆನ್ನಿಸಿಕೊಳ್ಳುವವರ ಮತ್ತು 'ಸಾಮಾನ್ಯ'ರ ನಡುವಣ ಕಂದಕ ಮುಂದುವರಿದಿರುವು ದನ್ನು ಅಲ್ಲಗಳೆಯುವಂತಿಲ್ಲ. ಬಗೆಬಗೆಯ ಆರಕ್ಷಣೆಗಳಿಗಾಗಿ ಮುಗಿಯದ ಬೇಡಿಕೆ ಇದರ ಒಂದು ಸೂಚಕವಷ್ಟೆ. ಇದಕ್ಕಿಂತ ಆತಂಕಕಾರಿಯಾದದ್ದು ಸಮಾಜದ ವಿವಿಧ ಅಂಗಗಳ ನಡುವಣ ಮಾನಸಿಕ ಧ್ರುವೀಕರಣ. ಇದು ಆರೋಗ್ಯಕರವಲ್ಲವೆಂದೂ ಅಭ್ಯುದಯಕ್ಕೆ ಪ್ರತಿರೋಧಕವೆಂದೂ ಸ್ವಾಮೀಜಿ ಪ್ರಬಲವಾಗಿ ಪ್ರತಿಪಾದಿಸಿದರು. ವ್ಯಾವಹಾರಿಕ ಸ್ತರದಲ್ಲಿ ಈ ಭಿನ್ನತೆಗಳು ತೊಲಗಬೇಕೆಂದು ಅವರು ಆಗ್ರಹಿಸಿದುದು ಮಾತ್ರವಲ್ಲದೆ, ಈ ಸ್ಥಿತಿಯು ವೇದಾಂತ ಎಂದರೆ ಉಪನಿಷತ್ತಿನ ದರ್ಶನಕ್ಕೂ ಸಮ್ಮತವಲ್ಲವೆಂದು ಸಾರಿದರು. "ಮುಂದಿನ ಐವತ್ತು ವರ್ಷ ಬೇರೆಲ್ಲ ದೇವದೇವತೆಗಳನ್ನು ಬದಿಗಿರಿಸಿ; ರಾಷ್ಟ್ರೋನ್ನತಿಯೇ ನಿಮ್ಮ ಆರಾಧ್ಯದೈವವಾಗಲಿ" – ಎಂದು ಅವರು ಆವಾಹನೆ ನೀಡಿದರು. ಇದು ಮಹಾನ್ ಸಂತರೊಬ್ಬರ ಮುಖದಿಂದ ಹೊಮ್ಮಿದ ಕರೆ ಎಂಬುದನ್ನು ನೆನಪಿಸಿಕೊಂಡಾಗ ಅದರ ಮಹತ್ವ ನೂರ್ಮಡಿಗೊಳ್ಳುತ್ತದೆ.

## ಅಭ್ಯುದಯದರ್ಶನ

ಸ್ವಾಮಿ ವಿವೇಕಾನಂದರ ರಾಷ್ಟ್ರಾಭ್ಯುದಯ ದರ್ಶನವು **ಸರ್ವಜನೋನ್ನತಿ, ಸಾಮಾಜಿಕ ಸಾಮರಸ್ಯ, ಶಿಕ್ಷಣಪ್ರಸಾರ** – ಈ ಮೂರು ಅಂಶಗಳನ್ನು ಕೇಂದ್ರವಾಗಿ ಹೊಂದಿದೆ.

ಸ್ವಾಮೀಜಿಯವರು ಭಾರತದ ಆಧ್ಯಾತ್ಮಿಕ ಪುನರುಜ್ಜೀವಕರು ಮಾತ್ರವಲ್ಲ, ಮಾನವತಾವಾದವೇ ಅವರ ಜೀವಸ್ವರ. ಅವರು ದ್ರಷ್ಟಾರರು, ಶಿಕ್ಷಣೋತ್ತೇಜಕರು ಮತ್ತು ದೀನರ ಏಳ್ಗೆಯ ಸಚೇತಕರು. ಶಾಸ್ತ್ರಜಿಜ್ಞಾಸೆಗಳಿಗಿಂತ ಮಿಗಿಲಾಗಿ ಜನರ ದೈನಂದಿನ ಬದುಕಿನ ಆಶಯವನ್ನು ತನ್ನಲ್ಲಡಗಿಸಿಕೊಂಡ ಧಾರ್ಮಿಕತೆಗೆ ಸ್ವಾಮಿ ವಿವೇಕಾನಂದರು ಮಹತ್ವ ನೀಡಿದರು. ಸಮಾಜವಾದವನ್ನು ತಾತ್ತ್ವಿಕವಾಗಿ ಪೂರ್ಣ ಒಪ್ಪದಿದ್ದರೂ ಸ್ವಾಮೀಜಿ ಆ ದಿಶೆಯ ಪ್ರಯತ್ನಗಳನ್ನು ಸಮರ್ಥಿಸಿದರು. ಅಂತಹ

ಸಮಾಜವಾದಕ್ಕೆ ಆಧ್ಯಾತ್ಮಿಕ ಹಿನ್ನೆಲೆ ಅವಶ್ಯವೆಂಬುದು ಅವರ ಅಭಿಪ್ರಾಯ. ಅದು ಎಷ್ಟು ಸತ್ಯವೆಂಬುದನ್ನು ವರ್ತಮಾನದ ಪರಿಸ್ಥಿತಿ ರುಜುವಾತು ಮಾಡಿದೆ. ಕೇವಲ ಆಡಳಿತದ ಸಂರಚನೆಗಳಿಂದ ರಾಷ್ಟ್ರೋನ್ನತಿ ಸಾಧ್ಯವಾಗುವುದಾದಲ್ಲಿ ಇಷ್ಟು ದೀರ್ಘಕಾಲದ ತರುವಾಯವೂ, ದೇಶದ ಅರ್ಧದಷ್ಟು ಜನತೆ ಬಡತನ–ಅನಕ್ಷರತೆಗಳಿಗೂ, ಸಾಮಾಜಿಕ ಹಿನ್ನಡೆಗೂ ಈಡಾಗಿರುವ ಸ್ಥಿತಿ ಇರುತ್ತಿರಲಿಲ್ಲ.

ಪಾಶ್ಚಾತ್ಯ ಮೂಲದ ಸಮಾಜವಾದಕ್ಕಿಂತ ಭಿನ್ನವಾದದ್ದು ಸ್ವಾಮೀಜಿಯವರ ಸಮಾಜವಾದ. ಪಾಶ್ಚಾತ್ಯ ಸಮಾಜವಾದದ ಗುರಿ ಸಂಘರ್ಷದ ಮೂಲಕ ಆರ್ಥಿಕ–ಸಾಮಾಜಿಕ ಅಭಿವೃದ್ಧಿ. ಸ್ವಾಮೀಜಿಯವರ ಕಲ್ಪನೆಯ ಸಮಾಜವಾದದ ಗುರಿ ಪ್ರೀತಿ–ಅನುಕಂಪ–ಸಹಾನುಭೂತಿಗಳ ಪ್ರಸರಣದ ಮೂಲಕ ವ್ಯಕ್ತಿಯ, ಸಮಾಜದ ಹಾಗೂ ರಾಷ್ಟ್ರದ ಸರ್ವಾಂಗೀಣ ಅಭ್ಯುದಯ. ಅವರದು ಆಧ್ಯಾತ್ಮಿಕ ಆಧಾರದ ಸಮಾಜವಾದ.

"ಒಳ್ಳೆಯದನ್ನು ಮಾಡಬೇಕೆಂಬ ಇಚ್ಛೆಯೇ ನಮಗಿರುವ ಪರಮ ನೈತಿಕ ಪ್ರವರ್ತಕ ಶಕ್ತಿಯಾಗಿದೆ. ಇತರರಿಗೆ ಸಹಾಯ ಮಾಡುವುದು ಒಂದು ವಿಶೇಷ ಅವಕಾಶ ಎಂಬುದನ್ನು ಸರ್ವದಾ ಜ್ಞಾಪಕದಲ್ಲಿಡಬೇಕು... ಈ ಪ್ರಪಂಚದಲ್ಲಿ ನಿಮ್ಮ ಕೃಪೆ–ದಯೆಗಳನ್ನು ನೀವು ತೋರಿಸಲು, ಆ ಮೂಲಕ ನೀವು ಶುದ್ಧರೂ ಸಿದ್ಧರೂ ಆಗಲು ಅವಕಾಶ ದೊರೆತುದಕ್ಕಾಗಿ ನಿಮಗೆ ಉಪಕಾರಸ್ಮರಣೆಯಿರಲಿ... ಈ ಪ್ರಪಂಚಕ್ಕೆ ಸಹಾಯ ಮಾಡಬೇಕೆಂಬ ಮಾತನ್ನು ಬಿಟ್ಟುಬಿಡೋಣ. ಅದು ನಿಮ್ಮ ಅಥವಾ ನನ್ನ ಸಹಾಯ ಬರುತ್ತದೆಂದು ಕಾದುಕೊಂಡಿಲ್ಲ. ಆದರೂ ನಾವು ಸದಾ ಕಾರ್ಯ ಮಾಡಬೇಕು; ಏಕೆಂದರೆ ಆ ಪ್ರಕಾರ ಮಾಡುವುದು ನಮಗೆ ಪ್ರಾಪ್ತವಾಗಿರುವ ಒಂದು ವರ. ನಾವು ಪರಿಪೂರ್ಣವಾಗಲು ಇರುವ ಏಕೈಕ ಮಾರ್ಗ ಅದು... ನಮ್ಮ ನೆರೆಹೊರೆಯವರಿಗೆ ಸಹಾಯ ಮಾಡುವುದರ ಮೂಲಕ ಈಶ್ವರಭಜನೆಯನ್ನು ಮಾಡಲು ನಮಗೆ ಅವಕಾಶ ದೊರಕುವುದು ಒಂದು ಮಹತ್ತರವಾದ ಸುಯೋಗವಲ್ಲವೇನು?" (ಕರ್ಮಯೋಗ. ಕೃತಿಶ್ರೇಣಿ, ಸಂ. ೧, ಪುಟ ೭೯–೮೦)

## ಸಾಮರಸ್ಯ ಸ್ಥಾಪನೆ, ಶಿಕ್ಷಣಪ್ರಸಾರ

ಈಚಿನ ದಶಕಗಳಲ್ಲಿ ಸೆಕ್ಯುಲರಿಸ್ಮ್ ಎಂಬ ಹೆಸರಿನ ವಿಶಿಷ್ಟ ವಾದವು ಭಾರತದ ರಾಜಕಾರಣದಲ್ಲಿ ಪ್ರಾಮುಖ್ಯ ಪಡೆದಿದೆಯಷ್ಟೆ. ಯಾವುದರ ಆಶಯ ಸಾಮರಸ್ಯವಾಗಿದ್ದಿತೋ ಅದು ವಿಧರ್ಮೀಯತೆಯಲ್ಲಿ ಪರ್ಯವಸಾನಗೊಂಡಿರುವುದು ಒಂದು ವಿಪರ್ಯಾಸ. ಭಾರತದಂಥ ವಿಶ್ವ ಉದಾರ ರಾಷ್ಟ್ರಕ್ಕೆ ಯಾರೂ ಸಾಮರಸ್ಯವನ್ನು ಬೋಧಿಸಬೇಕಾದುದರ ಅಗತ್ಯವೇನಿರಲಿಲ್ಲ. ಅಗತ್ಯವಿದ್ದುದು ಸಾಮರಸ್ಯಭಂಜಕ ಪ್ರವೃತ್ತಿಗಳ ನಿಯಂತ್ರಣದ್ದು. ಈ ಪ್ರವೃತ್ತಿಗಳ ನಿಜಸ್ವರೂಪವನ್ನು ಗ್ರಹಿಸುವುದು ಅತ್ಯವಶ್ಯವೆಂದು ಸ್ವಾಮಿ ವಿವೇಕಾನಂದರು ಅಂದೇ ಎಚ್ಚರಿಸಿದ್ದರು. ವೈವಿಧ್ಯದಲ್ಲಿ ನೆಲೆಗೊಂಡ ಏಕತೆ ವಿಶ್ವನಿಯಮವೆಂಬ ತಥ್ಯದ ನಿರಾಕರಣ ಮೊದಲಾದ ಹಲವಾರು ಎಳೆಗಳು ಈಗಿನ ನಿಷೇಧಕರ ಬುದ್ಧಿ ಹಾಗೂ ವೃತ್ತಿಯನ್ನು ರೂಪಿಸಿವೆ.

> "ಸುಮಾರು ೧೨೦೦ ವರ್ಷಗಳ ಹಿಂದೆ ಸಂತರೊಬ್ಬರು ಹಿಂದೂಧರ್ಮದ ನಿಜಸ್ವರೂಪವನ್ನು ನಿರೂಪಿಸಿದುದು ಮಾತ್ರವಲ್ಲದೆ ಅದನ್ನು ಶಾಸ್ತ್ರಗಳ ಆಧಾರದಿಂದ ಸಿದ್ಧಪಡಿಸಿದರು. ಅಂಥ ಉದಾತ್ತ ಧರ್ಮವೊಂದು ನಮ್ಮ ದೇಶದಲ್ಲಿ ಉಗಮಗೊಂಡದ್ದು ಅತಿಶಯದ ಸಂಗತಿ. ಅದೊಂದು ಅಮೂಲ್ಯ ನಿಧಿ; ನಮ್ಮ ಸಂಸ್ಕೃತಿಯನ್ನು ಬಲಿಷ್ಠಗೊಳಿಸಿರುವ ವಿದ್ಯಮಾನ. ಆ ಸಮುನ್ನತ ಧರ್ಮವನ್ನು ವಿಶ್ವದಲ್ಲೆಲ್ಲ ಪ್ರಸಾರ ಮಾಡುವುದೇ ನಮ್ಮ ಜನಾಂಗಕ್ಕೆ ದೈವವಿಹಿತವಾದ ಕರ್ತವ್ಯ. ಹಿಂದೂಧರ್ಮದ ನಿಜಸ್ವರೂಪವನ್ನು ಆಗ ಪುನರ್ನಿರೂಪಿಸಿದ್ದವರು ಶಂಕರಾಚಾರ್ಯರು. ಹತ್ತೊಂಬತ್ತನೇ ಶತಮಾನದ ಅಂತ್ಯದಲ್ಲಿ ಅದೇ ಮಹತ್ಕಾರ್ಯ ಮಾಡಿರುವವರು ಸ್ವಾಮಿ ವಿವೇಕಾನಂದರು. ಅವರು ಆರಂಭಿಸಿದ ಆ ಕಾರ್ಯವನ್ನು ಈಗಿನವರು ಮುಂದುವರಿಸಿ ಸಫಲಗೊಳಿಸಬೇಕಾಗಿದೆ."
>
> –**ಬಾಲಗಂಗಾಧರ ತಿಲಕ್**
>
> ('ಕೇಸರಿ' ಪತ್ರಿಕೆ, ೮–೭–೧೯೦೨)

"ಸಮಾನತೆ, ವಿಶ್ವಬಾಂಧವ್ಯ...... ಇಂತಹ ಮಾತುಗಳನ್ನು ಕೇಳಿದಾಗ ಸ್ವಲ್ಪ ಜಾಗರೂಕರಾಗಿರಿ. ಆ ಮಾತಿನ ಹಿಂದೆ ಅನೇಕ ವೇಳೆ ತೀವ್ರವಾದ ಸ್ವಾರ್ಥ ಇದೆ. ಚಳಿಗಾಲದಲ್ಲಿ ಕೆಲವು ವೇಳೆ ಮೋಡ ಆವರಿಸುವುದು. ಬೇಕಾದಷ್ಟು ಗುಡುಗು–ಮಿಂಚಿನ ಆರ್ಭಟ ಇದ್ದರೂ ಒಂದು ಹನಿ ಮಳೆಯೂ ಇಲ್ಲ.... ನಮಗಿಂದು ಶ್ರದ್ಧಾಪೂರ್ವಕವಾದ ಕಾರ್ಯ ಹೆಚ್ಚಾಗಬೇಕು, ಮಾತು ಕಡಮೆಯಾಗಬೇಕು" (ಜ್ಞಾನಯೋಗ: 'ವಿಶ್ವಧರ್ಮದ ಆದರ್ಶ', ಕೃತಿಶ್ರೇಣಿ, ಸಂ. ೨, ಪುಟ ೨೨೨).

ಯುದ್ಧಗಳು ಮೊಳಕೆಯೊಡೆಯುವುದು ಮನಸ್ಸುಗಳಲ್ಲಿ ಎಂಬ ಹೇಳಿಕೆ ಪ್ರಸಿದ್ಧವಿದೆ. ಹೀಗಿರುವುದರಿಂದ ವಾದಗಳನ್ನು ತೂಕ ಹಾಕುವುದರಿಂದ ಹೆಚ್ಚು ಪ್ರಯೋಜನವಾಗದು; ಬದಲಾಗಿ ಧರ್ಮದ ಲಕ್ಷಣನಿರ್ದೇಶವೇ ಪುನರ್ವಿನ್ಯಾಸಗೊಳ್ಳಬೇಕು. ಈ ದಿಶೆಯ ಸೂತ್ರಗಳನ್ನು ಸ್ವಾಮಿ ವಿವೇಕಾನಂದರ ಉಪನ್ಯಾಸಗಳಲ್ಲಿ ಹತ್ತಾರೆಡೆಗಳಲ್ಲಿ ಕಾಣುತ್ತೇವೆ.

"ಒಂದು ಆದರ್ಶ ಧರ್ಮ ಇರುವುದಾದರೆ, ಅದು.... ವಿಭಿನ್ನ ಭಾವದವರನ್ನೆಲ್ಲ ಪೋಷಿಸುವಷ್ಟು ವಿಶಾಲವಾಗಿರಬೇಕು, ಉದಾರವಾಗಿರಬೇಕು. ತಾತ್ತ್ವಿಕನಿಗೆ ತತ್ತ್ವಶಕ್ತಿಯನ್ನು ನೀಡುವಂತಹದಿರಬೇಕು. ಭಕ್ತನಿಗೆ ಭಕ್ತನ ಹೃದಯವನ್ನು ನೀಡುವಂತಹದಿರಬೇಕು. ಆಚಾರಪರನಿಗೆ ಅದ್ಭುತ ಚಿಹ್ನೆ ಏನೇನನ್ನು ಒದಗಿಸಬಹುದೋ ಅದನ್ನೆಲ್ಲ ನೀಡುವಂತಹದಿರಬೇಕು. ಕವಿಗೆ ಬೇಕಾದಷ್ಟು ಕಲ್ಪನೆಗಳ ಜೊತೆಗೆ ಇನ್ನೂ ಹಲವು ವಸ್ತುಗಳನ್ನು ನೀಡುವಂತಹದಿರಬೇಕು. ಇಂತಹ ವಿಶಾಲ ಧರ್ಮವನ್ನು ರೂಪಿಸಬೇಕಾದರೆ ಧರ್ಮಗಳ ಮೂಲಕ್ಕೆ ಹೋಗಿ ಎಲ್ಲರನ್ನೂ ಸ್ವಾಗತಿಸಬೇಕು. 'ಹೊರಗಿಡುವುದಲ್ಲ, ಸ್ವೀಕಾರ' ಎಂಬುದು ನಮ್ಮ

ಪಲ್ಲವಿ. ಕೇವಲ ಸಹಿಷ್ಣುತೆ ಮಾತ್ರವಲ್ಲ." (ಜ್ಞಾನಯೋಗ: 'ವಿಶ್ವಧರ್ಮ ಸಾಕ್ಷಾತ್ಕಾರಕ್ಕೆ ಮಾರ್ಗ'. ಕೃತಿಶ್ರೇಣಿ, ಸಂ. ೨, ಪುಟ ೨೧೬).

ಸ್ವಾಮೀಜಿಯವರು ಶಿಕ್ಷಣದ ಪ್ರಾಮುಖ್ಯತೆ ಕುರಿತು ಮೇಲಿಂದ ಮೇಲೆ ಮಾತನಾಡಿದರು. ವಿದೇಶೀ ಪ್ರಭುತ್ವದ ಅಧಿಕಾರಾಕಾಂಕ್ಷೆ, ದೇಶೀಯರಲ್ಲಿಯೆ ನಿರ್ಮಾಣಗೊಂಡಿದ್ದ ಮಾನಸಿಕ ಗೊಂದಲ – ಈ ಎರಡೂ ಕಾರಣಗಳಿಂದ ದಾರಿ ತಪ್ಪಿದ್ದ ಶಿಕ್ಷಣವು ಸ್ವದೇಶಹಿತದೃಷ್ಟಿಯನ್ನು ಕೇಂದ್ರವಾಗಿರಿಸಿಕೊಂಡು ಪುನರ್ವಿನ್ಯಾಸ ಗೊಳ್ಳಬೇಕು ಎಂಬ ಸ್ವಾಮೀಜಿಯವರ ದಿಗ್ದರ್ಶನ ನೂರು ವರ್ಷಗಳ ತರುವಾಯವೂ ದೂರದ ಆಶಯವಾಗಿಯೆ ಉಳಿದಿರುವುದು ದುರದೃಷ್ಟಕರ. ಇನ್ನು ಮುಂದೆಯಾದರೂ ಆ ದಿಕ್ಕಿನಲ್ಲಿ ಬೇಗನೆ ಕಾರ್ಯಪ್ರವೃತ್ತರಾಗಬೇಕೆಂದು ಆಶಿಸಬೇಕಾಗಿದೆ. ಸ್ವಾಮೀಜಿಯವರಂತೂ ಈ ರಾಷ್ಟ್ರೀಯ ಅನಿವಾರ್ಯತೆಯನ್ನು ಸುಸ್ಪಷ್ಟಗೊಳಿಸಿದ್ದಾರೆ.

ಇನ್ನುಳಿದ ಧಾರ್ಮಿಕ ನಾಯಕರಿಗಿಂತ ಸ್ವಾಮಿ ವಿವೇಕಾನಂದರು ಸಾಮಾಜಿಕ ಸಾಮರಸ್ಯ, ಸಾರ್ವತ್ರಿಕ ಶಿಕ್ಷಣ, ಮಹಿಳೆಯರ ಅಭಿವೃದ್ಧಿ ಮೊದಲಾದ ಅಂಶಗಳಿಗೆ ಹೆಚ್ಚಿನ ಒತ್ತನ್ನು ನೀಡಿದರು. "ಭಾರತದ ವೈಶಿಷ್ಟ್ಯವಾದ ಜ್ಞಾನಸಂವಹನದ ಹಕ್ಕು ಪುರುಷರಿಗಿರುವಷ್ಟೇ ಸ್ತ್ರೀಯರಿಗೂ ಸಲ್ಲುತ್ತದೆ" ಎಂದಿದ್ದಾರೆ ಸ್ವಾಮೀಜಿ ('ದಿ ಮಾಸ್ಟರ್ ಎಸ್ ಐ ಸಾ ಹಿಮ್', ಪುಟ ೨೪೧). ಕೇವಲ ಬಾಹ್ಯ ಸಮಾನತೆಗಾಗಿ ಆಗ್ರಹಿಸುವ ಆಧುನಿಕ ಸ್ತ್ರೀವಾದಕ್ಕಿಂತ ಹೆಚ್ಚು ತೀಕ್ಷ್ಣವಾದದ್ದು ಸ್ವಾಮೀಜಿಯವರ ದೃಷ್ಟಿ.

"ಯಾವುದೇ ದೇಶದ ಪ್ರಗತಿಯ ಅತ್ಯುತ್ತಮ ಮಾನದಂಡ ವೆಂದರೆ ಆ ದೇಶದಲ್ಲಿ ಮಹಿಳೆಯರನ್ನು ಹೇಗೆ ನಡೆಸಿಕೊಳ್ಳಲಾಗುತ್ತಿದೆ ಎಂಬುದು" ಎಂದು ಸಾರಿದರು ಸ್ವಾಮೀಜಿ.

"ಯಾವ ದೇಶ ಅಥವಾ ಜನಾಂಗ ಸ್ತ್ರೀಯರಿಗೆ ಗೌರವ ಕೊಟ್ಟಿಲ್ಲವೋ ಅದು ಖಂಡಿತವಾಗಿ ಕೀರ್ತಿ ಪಡೆದಿಲ್ಲ; ಮುಂದೆ ಪಡೆಯುವುದೂ ಇಲ್ಲ...... ಎಲ್ಲಿ ಹೆಂಗಸರಿಗೆ ತಕ್ಕ ಗೌರವವಿಲ್ಲವೋ, ಎಲ್ಲಿ ಅವರು ದುಃಖಿಗಳೋ, ಆ ದೇಶ ಅಥವಾ ಜನಾಂಗ ಖಂಡಿತವಾಗಿಯೂ ಏಳಿಗೆಗೆ ಬರುವುದಿಲ್ಲ. ಈ ಕಾರಣದಿಂದಲೇ ಅವರನ್ನು ಮೊದಲು ಉದ್ಧರಿಸಬೇಕು." (ಸಂವಾದ, ಬೇಲೂರುಮಠ, ೧೯೦೧. ಕೃತಿಶ್ರೇಣಿ, ಸಂ. ೮, ಪುಟ ೨೧೩)

## ಹೊಸ ನುಡಿಗಟ್ಟಿನ ಆವಿಷ್ಕರಣ

ವಿಶಾಲ ಅಧ್ಯಯನದಿಂದಲೂ ಗಾಢ ಮಂಥನದಿಂದಲೂ ಪರಿಷ್ಕರಿಸಿಕೊಂಡ ಚಿಂತನೆಯನ್ನು ಪ್ರಾಚ್ಯ ಹಾಗೂ ಪಾಶ್ಚಾತ್ಯ ಕೇಳುಗರಿಗೆ ಅತ್ಯಂತ ಪ್ರಭಾವಿಯಾಗಿ ಸಂವಹನ ಮಾಡಿದ ಸ್ವಾಮೀಜಿ ಸಮಕಾಲೀನ ಸಂವಾದಕ್ಕೆ ಅಗತ್ಯವಿದ್ದ ಹೊಸ ನುಡಿಗಟ್ಟನ್ನು ನಿರ್ಮಿಸಿದರು. ಭಾಷೆಯನ್ನೇ ಹೀಗೆ ಹೊಸದಾಗಿ ಶ್ರುತಿಗೊಳಿಸಿದ ಅವರ ಈ ಕೊಡುಗೆಯೂ ಅಮೂಲ್ಯವಾದ್ದೆಂದು ಪರಿಗಣಿಸಲೇಬೇಕು. ಸ್ವಾಮೀಜಿಯವರ ಹೇಳಿಕೆಗಳಷ್ಟು ಅಧಿಕ ಪ್ರಮಾಣದಲ್ಲಿ ಈಗಲೂ ಎಲ್ಲೆಡೆ ಉದ್ಧೃತಗೊಳ್ಳುವ ವಾಙ್ಮಯ ರಾಶಿ ಬಹುಶಃ ಮತ್ತೊಂದಿಲ್ಲವೆಂದರೆ ಅತಿಶಯೋಕ್ತಿಯಾಗಲಾರದು. ಜಗತ್ತಿನಾದ್ಯಂತ ವಿದ್ಯುತ್ಸಂಚಾರ ಮಾಡಿಸಿದುದು ಸ್ವಾಮೀಜಿಯವರ ತೇಜೋಮಯ ವಾಣಿ. ಅದು ಅರ್ಥಗರ್ಭಿತವಾಗಿದ್ದುದಲ್ಲದೆ ಪ್ರೇಮಮಯವೂ ಆಪ್ತವೂ ಆಗಿದ್ದುದು ಅದರ ಅನನ್ಯತೆ. ಸ್ವತಃ ಗಾಯಕರೂ ಆಗಿದ್ದ ಸ್ವಾಮೀಜಿಯವರ ಒಂದೊಂದು ಮಾತೂ ಅಯಸ್ಕಾಂತಸದೃಶ.

ಇಪ್ಪತ್ತನೇ ಶತಮಾನದ ಭಾರತವನ್ನು ಪ್ರತ್ಯಕ್ಷವಾಗಿಯೂ ಪರೋಕ್ಷವಾಗಿಯೂ ರೂಪಿಸಿದವರು ಸ್ವಾಮಿ ವಿವೇಕಾನಂದರು ಎಂದು ಜವಾಹರಲಾಲ್ ನೆಹರು ಅವರೂ ಒಂದು ಸಂದರ್ಭದಲ್ಲಿ ಹೇಳಿದ್ದರು. ಹೀಗೆ ಸ್ವಾಮೀಜಿಯವರ ಬೋಧನೆಗಳ ಉಪಯುಕ್ತತೆ ಪ್ರಶ್ನಾತೀತ. ಅವರು ಹೊಸದೊಂದು ದರ್ಶನದ ಬಾಗಿಲುಗಳನ್ನು ತೆರೆದರಷ್ಟೆ ಅಲ್ಲ; ನಡುವೆ ಬಂದ ಅಡ್ಡಗೋಡೆಗಳನ್ನು ಉಚ್ಚಾಟಿಸಿದರು; ಕಲ್ಪನೆಗಳನ್ನು ವಿಶಾಲಗೊಳಿಸಿದರು, ಅವಕ್ಕೆ ಅರ್ಥ ತುಂಬಿದರು, ಅವನ್ನು ಹೆಚ್ಚು ಸಾಂದ್ರಗೊಳಿಸಿದರು. ಪ್ರಾದೇಶಿಕವೆಂದು ಭಾವಿಸಲ್ಪಟ್ಟಿದ್ದ ಪರಂಪರೆಯ ಕೇಂದ್ರದ ಒಳಹೊಕ್ಕು ಅದರ ಸಾರವನ್ನು ಪ್ರಕಟಗೊಳಿಸಿದರು. ಅವರು ಯುಗಪುರುಷರೆನಿಸಿದ್ದು ಈ ಕಾರಣದಿಂದಲೇ.

**ಚಿಂತನಪ್ರಭ**

**ವಿವೇಕ ಶಕ್ತಿ**

**ಒಂದು ಶಕ್ತಿ ದೂರದಿಂದ ಇಲ್ಲಿಗೆ ಬಂತು, ಮಿಂಚಿತು, ಗುಡುಗಿತು, ಸಿಡಿಲು ಸೂಸಿತು. ಶಕ್ತಿಯ ಜಲಪಾತವಾಗಿ ಭೋರ್ಗರೆಯಿತು. ಆ ಶಕ್ತಿಯ ಮೂರ್ತಿ ಮತ್ತೆ ಬಂದಲ್ಲಿಗೆ ಹಿಂದಿರುಗಿದಂತೆ ತೋರಿದರೂ ಹಾಗಾಗಲಿಲ್ಲ. ಶಕ್ತಿಪಾತ ಸಂತತವಾಗಿ ನಡೆಯುತ್ತಲೇ ಹೋಯಿತು. ಜಗತ್ತು ಅದರಲ್ಲೂ ಭಾರತ ಆ ಶಕ್ತಿಯನ್ನು ಅನುಭವಿಸುವುದನ್ನು ಒಂದು ಕ್ಷಣವೂ ಬಿಡುವಂತಿಲ್ಲ. ಸ್ವಾಮಿ ವಿವೇಕಾನಂದರೇ ಆ ಶಕ್ತಿ. ಅವರ ವ್ಯಕ್ತಿತ್ವದ ಅನೇಕ ಮುಖಗಳನ್ನು ಸಂಗ್ರಹವಾಗಿಯಾದರೂ ಸ್ಮರಿಸಿಕೊಳ್ಳುವುದು ಬಹಳ ಪ್ರಯೋಜನಕಾರಿ. ಅವರು ಮೊದಲು ಯೋಗಿಯೋ, ಮೊದಲು ದೇಶಭಕ್ತರೋ? ಅವರ ಹೃದಯದಲ್ಲಿ ಮೊದಲ ಸ್ಥಾನ ಭಗವಂತನಿಗೋ, ಭಾರತ ಭೂಮಿಗೋ? ಹೇಳುವುದು ಕಷ್ಟ. ಈ ಕಷ್ಟವೇ ಅವರ ವಕ್ತಿತ್ವಕ್ಕೆ ಹೊಸ ಮೆರಗು ಕೊಡುತ್ತದೆ. ಅಷ್ಟರಮಟ್ಟಿಗೆ ದೇವರು–ದೇಶಗಳು ಅವರ ಚೇತನದಲ್ಲಿ ಹಾಸುಹೊಕ್ಕಾಗಿದ್ದವು. ಅವರ ಉಚ್ಛ್ವಾಸ ದೇವರು – ನಿಶ್ವಾಸ ದೇಶ. ಈ ಎರಡರ ಪ್ರೇಮ ಇಲ್ಲದಿದ್ದರೆ ಅವರು ಸ್ವಲ್ಪಕಾಲವೂ ಭೂಮಿಯ ಮೇಲೆ ಇರುತ್ತಿರಲಿಲ್ಲ ಎಂದು ತೋರುತ್ತದೆ. ಅವರ ಪ್ರಭಾವ ಎಷ್ಟರಮಟ್ಟಿಗಾಯಿತು ಎಂದರೆ, ಅನೇಕ ಸಂಸಾರಿಗಳು ತ್ಯಾಗದ, ಯೋಗದ ವೈಭವವನ್ನು ಕಂಡರು. ಕೆಲವರು ವೈರಾಗ್ಯದಿಂದ ಪ್ರಚೋದಿತರಾಗಿ ಅವರವರ ದಾರಿಯಲ್ಲಿ ನಡೆದರೂ, ಸ್ವಾಮೀಜಿ ಪ್ರಾರಂಭಿಸಿದ ಕಾರ್ಯವನ್ನು ಅವರೆಲ್ಲ ಮುಂದುವರಿಸಿದರು.**

**ಡಾ. ಪ್ರಭುಶಂಕರ (ಆಧಾರ : ಸ್ವಾಮಿ ವಿವೇಕಾನಂದ)**